ಶ್ರೀಮತಿ ಸಂಮಾ ವಸಂತ್.—ನಮ್ಮ ಪಶುವೈದ್ಯ ಶಾಲೆಗಳಿಗೆ ಸರಿಯಾಗಿ ಔಷಧಿ ಪೂರೈಕೆ ಯಾಗುತ್ತಾ ಇಲ್ಲ. ಅಲ್ಲಿಗೆ ಹೆಚ್ಚಿಗೆ ಔಷಧಿಗಳನ್ನು ಒದಗಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

೨೧೪೪. ಶ್ರೀ ಬಿ. ಸ್ವಾಮಿರಾವ್ (ಹೊಸ ನಗರ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯು ಅಸ್ತಿತ್ವದಲ್ಲಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಶೆಟ್ಟಿಹಳ್ಳಿ ಪುರದಾಳು ಮತ್ತು ಮಲೆಶಂಕರ ಪ್ರದೇಶಗಳ ಕಾಡಾನೆ ಹಾವಳಿಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಗಾಡಿಕೊಪ್ಪದ ರೈತನೊಬ್ಬನನ್ನು ಕಾಡಾನೆ ಕೊಂದು ಹಾಕಿರುವ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆಯೇ ?

ಈ) ಹಾಗಿದ್ದಲ್ಲಿ ಕಾಡಾನೆಯ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಬಂದಿದೆ.

ಈ) ಕಾಡಾನೆಗಳು ಗ್ರಾಮದೊಳಗೆ ಅಥವಾ ಗ್ರಾಮಸ್ಥರ ಖಾಸಗೀ ಜಮೀನಿಗೆ ಬಂದರೆ ಅವುಗಳನ್ನು ಅರಣ್ಯದೊಳಗೆ ಓಡಿಸಲು ಕೂಡಲೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಆನೆಗಳು ಅರಣ್ಯದಿಂದ ಹೊರ ಹೋಗದಂತೆ ಅರಣ್ಯ ಗಡಿಯ ಸುತ್ತ ಕಂದಕವನ್ನು ತೋಡಲಾಗಿದೆ. ಇದಲ್ಲದೆ ಗ್ರಾಮಾಂತರ ಜನರ ಮತ್ತು ಕಾಡಿನಲ್ಲಿ ವಾಸಿಸುವ ಗಂಡ್ಡಗಾಡು ಜನರ ಸಹಕಾರವನ್ನು ಈ ದಿಸೆಯಲ್ಲಿ ಪಡೆಯಲಾಗುತ್ತಿದೆ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೆ ನಾನು ಪ್ರಶ್ನೆ ಕೇಳಿದ ಮೇಲೆ ಮತ್ತೆ ಯಾರಿಗಾದರೂ ಕಾಡಾನೆಗಳು ಕೊಂದು ಹಾಕಿವೆಯೇ ? ಪರಿತ್ತ ಕಂದಕಗಳನ್ನು ತೋಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ, ಬಹುಶಃ ಈ ತರಹದ ಉತ್ತರವನ್ನು ಕೊಡುವುದರ ಮೂಲಕ ಅಧಿಕಾರಿಗಳು ತಮಗೂ ಸಹ ಮೋಸ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ನಿಜವಾಗಿಯೂ ಅಲ್ಲಿ ಕಂದಕಗಳನ್ನು ತೋಡಿಲ್ಲ. ನನಗೆ ಗೊತ್ತಿದೆ, ಏಕೆಂದರೆ ವಿಧಾನಸೌಧ ಬಿಟ್ಟವನು ನಾನು ಯಾವಾಗಲೂ ನನ್ನ ಕ್ಷೇತ್ರಕ್ಕೆ ಹೋಗುತ್ತಿರುತ್ತೇನೆ ಒಂದು ವೇಳೆ ಕಂದಕ ತೋಡಿದ್ದೇವೆ ಎಂದು ಅಧಿಕಾರಿಗಳು ಸುಳ್ಳು ಲೆಕ್ಕ ಕೊಟ್ಟು ಬಿಲ್ ಮಾಡಿಕೊಂಡಿರಬಹುದು. ಅಂತೆಯೇ ಈಗ ಕಾಡಾನೆಗಳು ಎಷ್ಟು ಇದ್ದಾವೆ ಎಂದು ತಿಳಿಸುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು (ಈ) ಪ್ರಶ್ನೆಗೆ ಕಾಡಾನೆಯ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ, ಅರಣ್ಯ ಗಡಿಯ ಸುತ್ತ ಕಂದಕವನ್ನು ತೋಡಲಾಗಿದೆ ಎಂದು ಹೇಳಿದ್ದೇನೆ ಸರಕಾರದವರು ೨೧೨೭ ಕಿ.ಮೀ ಉದ್ದದ ಕಂದಕವನ್ನು ಬೇರೆ ಬೇರೆ ಕಡೆಗಳಲ್ಲಿ ತೋಡಿದ್ದಾರೆ. ಮಾನ್ಯ ಸದಸ್ಯರ ಅನಿಸಿಕೆಯೂ ನಿಜ ಶಿವಮೊಗ್ಗ ಜಿಲ್ಲೆಯ ಕೆಲವು ಕಡೆಗಳಲ್ಲಿ ಈ ರೀತಿಯ ಕಂದಕವನ್ನು ತೆಗೆದಿಲ್ಲ. ಅಲ್ಲಿಯೂ ಕೂಡ ಕಂದಕವನ್ನು ತೆಗೆಯುವ ಯೋಜನೆಯು ಸರಕಾರಕ್ಕೆ ಇದೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿರುವ ಜಾಗದಲ್ಲಿಯೂ ಕೂಡ ಕಂದಕವನ್ನು ತೆಗೆಯುವ ಯೋಜನೆಯನ್ನು ಚಾಲ್ತಿಯಲ್ಲಿ ತರುತ್ತೇವೆ.

ಶ್ರೀ ಬಿ ಸ್ವಾಮಿರಾವ್.— ಅಧ್ಯಕ್ಷರೇ, ನಾನು ಇದೇ ವಿಷಯದ ಬಗ್ಗೆ ಒಂದು ವಾರದ ಹಿಂದೆ ನಿಯಮ ೩೩ರ ಕೆಳಗೆ ಕೇಳಿದ್ದೆ. ನಾಟಾ ಮತ್ತು ಗಂಧದ ಮರವನ್ನು ಕಳ್ಳತನದಿಂದ ತೆಗೆಯಲ್ಪಟ್ಟ ಬಂದವರನ್ನು ಪ್ರಾಣಿಗಳು ಕೊಂದಂ ಹಾಕಿವೆ ಎಂದು ಅಲ್ಲಿಯ ಅಧಿಕಾರಿಗಳು ಒಂದು ರಿಪೋರ್ಟನ್ನು ಕಳುಹಿಸಿದ್ದಾರೆ. ಅದಕ್ಕೆ ಇಲ್ಲಿಗೆ ಬಂದಿರತಕ್ಕಂಥ ಹೇಳಿಕೆ ಬೇರೆ ಇದೆ. ಶಿವಮೊಗ್ಗದ ಡಿ.ಎಫ್.ಓ. ಅವರೇ ಒಂದು ಲೋಡ್ ಸಾಗುವಾನಿ ಮರವನ್ನು ಸಾಗಿಸಿಕೊಂಡು ಹೋಗುವಾಗ ಅಲ್ಲಿಯ ಹಳ್ಳಿಯವರೇ ಅದನ್ನು ಹಿಡಿದಿದ್ದಾರೆ. ಅದು ಮಾನ್ಯ ಮಂತ್ರಿಯವರಿಗೆ ಗೊತಿ ದೆಯೇ ? ಬಡ ರೈತರ ಮೇಲೆ ಏನಾದರೂ ಸುಳ್ಳು ರಿಪೋರ್ಟ್ ಕೊಡುವ ಈ ಅಧಿಕಾರಿಗಳ ಬಗ್ಗೆ ತನಿಖೆ ನಡೆಸುತ್ತೀರಾ ?

ಅಧ್ಯಕ್ಷರು.— ಜನರೇ ಅಧಿಕಾರಿಯು ಮಾಡುತ್ತಿದ್ದ ಕಳ್ಳತನವನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ನೀವು ಏನು ಹೇಳುತ್ತೀರಿ ?

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಆ ಬಗ್ಗೆ ಅಧಿಕಾರಿಗಳಿಂದ ವಿವರಣೆಯನ್ನು ಪಡೆಯುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಅರಣ್ಯ ಇಲಾಖೆ ಮಂತ್ರಿಯವರಿಗೆ ಇಲಾಖೆಯ ವಿಚಾರ ಗೊತ್ತಿಲ್ಲವೆ ? ಇಲ್ಲದಿದ್ದರೆ ನಾನು ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಸದಸ್ಯರು ವಿವರಗಳನ್ನು ಕೊಡಲಿ, ಆ ಬಗ್ಗೆ ವಿಚಾರಣೆ ಮಾಡಿಸುತ್ತೇನೆ.

Merger of K-Tex with K.S.H.D. Corporation

1507. SRI R. VENKATARAMAIAH (Mulbagal).— Will the Minister for ports, fisheries and small scale Industries be pleased to state.

a) The number of weaker and master weavers in the State in the Cooperative field and non-Coperative field?

b) The total production of handloom cloth in K-tex and KHDC from 1984-85 till date;

c) Whether it is a fact that there are two parallel bodies in K-tex and KHDC in the handloom sector;

d) If so, the reasons therefore;

e) Whether there is any proposals before the Government to merge K-Tex in Karnataka State Co-operative Apex Society with the Karnataka Handloom Development Corporation to achieve better results?

f) The measures contemplated by the Government to dispose off the accumulated stocks of handloom cloth in these two bodies?

SRI M. RAGUPATHI (Minister for ports, Fisheries and Small Scale Industries)

As per 1976 Census

a) No. of Weavers	:	76629
b) No. of Weavers under non-coop. filds	:	40727
c) No. of Weavers under non-coop. sector including Master Weavers	:	35902